ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿ ಕೋರಿದ್ದೆ, ತಾವು ಅನುಮತಿ ಕೊಟ್ಟಿದ್ದೀರಿ. ಕಳೆದ ಒಂದು ವಾರದಿಂದ ಘಟಪ್ರಭಾ ನದಿ ನೀರು ಕಲುಷಿತಗೊಂಡು ಮುಧೋಳದಲ್ಲಿರುವ ಬ್ಯಾರೇಜ್‌ನಲ್ಲಿ ಮೀನುಗಳು ಹಾಗೂ ಕಪ್ಪೆಗಳು ಸತ್ತಿರುವುದಲ್ಲದೆ, 40 ದನಕರುಗಳು ಸತ್ತಿವೆ. ಈ ನೀರು ಕುಡಿಯುವುದಕ್ಕೆ ಬಾರದ ಹಾಗಾಗಿದೆ. ನದಿ ನೀರನ್ನೇ ಅವಲಂಬಿಸಿರತಕ್ಕಂತಹ ಮುಧೋಳ ಪಟ್ಟಣ ಹಾಗೂ ಸುತ್ತಮುತ್ತಲ ಹಳ್ಳಿಗಳಿಗೆ ನೀರಿನ ತೊಂದರೆಯಾಗಿದೆ. ಕೃಷಿ ಚಟುವಟಿಕೆಗಳೂ ತೊಂದರೆಯಾಗಿದೆ. ಆ ಕಾರಣಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಹಿಡ್ಕಲ್ ಜಲಾಶಯದಿಂದ ಕೂಡಲೇ 1.5 ಟಿ.ಎಮ್.ಸಿ ನೀರನ್ನು ಘಟಪ್ರಭಾ ನದಿಗೆ ಬಿಟ್ಟು ಮಲಿನವಾಗಿರತಕ್ಕಂತಹ ನೀರನ್ನು ಸ್ವಚ್ಛಗೊಳಿಸುವುದರೊಂದಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಸಾಯಂಕಾಲ ನಿಯಮ 69 ರ ಅಡಿಯಲ್ಲಿ ಚರ್ಚೆ ಮಾಡೋಣ.

1. ವಿತ್ತೀಯ ಕಾರ್ಯಕಲಾಪಗಳು

i) **ವಿಷಯ:** 2013–14ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಮಂಡನೆ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, 2013–14ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತು) ಸಭೆಯ ಮುಂದೆ ಮಂಡಿಸುತ್ತೇನೆ.